# ಕರ್ನಾಟಕ ಉಚ್ಚ ನ್ಯಾಯಾಲಯ

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

## ಶ್ರೀ ರಾಮಕೃಷ್ಣ ಎಂ ವಿರುದ್ದ ಕರ್ನಾಟಕ ಸರ್ಕಾರದ ಪರವಾಗಿ ಕಂದಾಯ ಕಾರ್ಯದರ್ಶಿ ಹಾಗೂ ಇನ್ನೊಬ್ಬರು*

ರಿಟ್ ಅರ್ಜಿ ಸಂಖ್ಯೆ: 27947/2011 (ಕೆಎಲ್ಆರ್ –ಆರ್/ಎಸ್ ಯು ಆರ್) ದಿನಾಂಕ: 9ನೇ ಮಾರ್ಚ್, 2020

### ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:

ಜಿಲ್ಲಾಧಿಕಾರಿಗಳು, 48 ವರ್ಷಗಳಿಗಿಂತ ಹೆಚ್ಚಿನ ಕಾಲದ ತರುವಾಯ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ (ಇಲ್ಲಿ ಸಂಕ್ಷಿಪ್ತತೆಗಾಗಿ " ಅಧಿನಿಯಮ 99 " ಎಂದು ಉಲ್ಲೇಖಿಸಲಾಗಿದೆ) 136 ( 3) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಿರುವಂತಹ ದುರದೃಷ್ಟಕರ ಮೊಕದ್ದಮೆಯಾಗಿದೆ.2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು ಆರ್ಆರ್ಟಿ ( 2) (ಎನ್) ಸಿಆರ್ 501/2009-10 ರಲ್ಲಿದಿನಾಂಕ: 01-04-2011 ರಂದು ಹೊರಡಿಸಿದ ಪ್ರಶ್ನಿತ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಅರ್ಜಿದಾರರು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

I.ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು

2. ಮೈಸೂರು ಭೂ ಕಂದಾಯ ಸಂಹಿತೆ, 1888 ರ 41 ರಿಂದ 43 ಎಂ ರವರೆಗಿನ ನಿಯಮಗಳನ್ನು ಅಧಿಸೂಚನೆ ಸಂಖ್ಯೆ.ಆರ್ಡಿ 4 ಎಲ್ಡಿ 1960,ದಿನಾಂಕ: 19-05-1960 ರ ರ ಮೂಲಕ ಪ್ರತ್ಯಾಯೋಜಿಸಿ, ಸರ್ಕಾರವು ಭೂ ಮಂಜೂರಾತಿಗೆ ಅರ್ಹರಾದ ವ್ಯಕ್ತಿಗಳ ಪ್ರವರ್ಗದಲ್ಲಿ ರಾಜಕೀಯ ಸಂತ್ರಸ್ಥರು " ಎಂಬ ಪದವನ್ನು ಸಹ ಸೇರಿಸಲಾಗಿತ್ತೆಂಬುದು ಅರ್ಜಿದಾರರ ವಾದವಾಗಿದೆ.ತದನುಸಾರವಾಗಿ, ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ತರುವಾಯ, ವಿಭಾಗಾಧಿಕಾರಿಗಳು, ಭೂ ಮಂಜೂರಾತಿ ಆದೇಶ ಸಂಖ್ಯೆ ಎಲ್ಎನ್ಡಿ.ಎಸ್ಆರ್/1-551/1960-61,ದಿನಾಂಕ: 14-11-1962 ರಂತೆ ರಾಜಕೀಯ ಸಂತ್ರಸ್ಥರಾಗಿದ್ದ ಶ್ರೀ ಎಂ. ರಾಮಮೂರ್ತಿ ಎಂಬೊಬ್ಬರಿಗೆ ಅರೆಬಿನ್ನಮಂಗಲ ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನ (ಹಿಂದಿನ ದೇವನಹಳ್ಳಿ ತಾಲ್ಲೂಕು), ಸರ್ವೆ ಸಂಖ್ಯೆ -1 ರಲ್ಲಿ 6 ಎಕರೆಗಳ ಭೂಮಿಯನ್ನು ಮಂಜೂರು ಮಾಡಿದ್ದರು.ಒಟ್ಟಾರೆಯಾಗಿ, ಸದರಿ ಸರ್ವೆ ಸಂಖ್ಯೆ .1 ರಲ್ಲಿ ಒಟ್ಟು 16 ವ್ಯಕ್ತಿಗಳಿಗೆ ತಲಾ 6 ಎಕರೆಗಳ ಭೂಮಿಯನ್ನು ಮಂಜೂರು ಮಾಡಲಾಗಿತ್ತು.ಎಲ್ಲಾ ಕಂದಾಯ ದಾಖಲೆಗಳನ್ನು ರಾಮಮೂರ್ತಿಯವರ ಹೆಸರಿನಲ್ಲಿ ನಮೂದಿಸಲಾಯಿತು.ಸದರಿ ರಾಮಮೂರ್ತಿಯವರ ಮರಣದ ನಂತರ, ಆತನ ಪತ್ನಿ-ಕಮಲಮ್ಮ ಪತಿಯ ಆಸ್ತಿಗೆ ಉತ್ತರಾಧಿಕಾರಿಯಾಗಿ ಎಲ್ಲಾ ಕಂದಾಯ ದಾಖಲೆಗಳಲ್ಲಿ ತನ್ನ ಹೆಸರನ್ನು ನಮೂದಿಸಿದರು.ತದನಂತರ, ಶ್ರೀ ರಾಮಮೂರ್ತಿಯವರ ಪತ್ನಿ ಶ್ರೀಮತಿ ಕಮಲಮ್ಮ ಅದರಲ್ಲಿನ ಮೂರು ಎಕರೆಗಳನ್ನು ಶ್ರೀ ಪುರುಷೋತ್ತಮ್ ಎಂಬುವರಿಗೆ ಮಾರಾಟ ಮಾಡಿದರು ಮತ್ತು ಉಳಿದ ಮೂರು ಎಕರೆಗಳ ಭೂಮಿಯನ್ನು ಶ್ರೀಮತಿ ಯಶೋಧ ಎಂಬುವವರ ಹೆಸರಿನಲ್ಲಿದಿನಾಂಕ: 23-02-1983 ರ ಎರಡು

ನೋಂದಾಯಿತ ಮಾರಾಟ ಪತ್ರಗಳಲ್ಲಿ ಮಾರಾಟ ಮಾಡಿದರು.ಪ್ರತಿಯಾಗಿ ಸದರಿ ಪುರುಷೋತ್ತಮ್ ಮತ್ತು ಯಶೋಧಮ್ಮ, ತಮ್ಮ 3 ಎಕರೆಗಳ ಭೂಮಿಯನ್ನು ಮೌಲ್ಯಯುತ ಪರಿಗಣನೆಗಾಗಿದಿನಾಂಕ: 17-03-1989 ರ ಎರಡು ನೋಂದಾಯಿತ ಮಾರಾಟ ಪತ್ರಗಳ ಅಡಿಯಲ್ಲಿ ಪ್ರಸ್ತುತ ಅರ್ಜಿದಾರರ ತಂದೆ ಮುನಿಸ್ವಾಮಿಗೌಡರವರ ಹೆಸರಿನಲ್ಲಿ ಮಾರಾಟ ಮಾಡಿದರು.ಸದರಿ ಮುನಿಸ್ವಾಮಿಗೌಡರವರು ತಮ್ಮ ಜೀವಿತಾವಧಿಯಲ್ಲಿ, 4 ಎಕರೆಗಳ ಭೂಮಿಯನ್ನು ಕೃಷಿಯೇತರ/ಕೈಗಾರಿಕಾ ಉದ್ದೇಶಗಳಿಗಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಿದರು.ತದನುಸಾರವಾಗಿ, ಈ ಅಧಿನಿಯಮದ 95 ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಜಿಲ್ಲಾಧಿಕಾರಿಗಳು ತಮ್ಮ ಅಧಿಕಾರಗಳನ್ನು ಚಲಾಯಿಸಿ, ಅನುಬಂಧ-ಪಿ ' ಯ ಪ್ರಕಾರದಿನಾಂಕ: 25-11-1989 ರ ಕಚೇರಿ ಜ್ಞಾಪನಾ ಪತ್ರದ ಮೂಲಕ, ಕೃಷಿಯೇತರ/ಕೈಗಾರಿಕಾ ಉದ್ದೇಶಗಳಿಗಾಗಿ ಸರ್ವೆ ಸಂಖ್ಯೆ.1 ರಲ್ಲಿನ 4 ಎಕರೆಗಳ ಭೂಮಿಯನ್ನು ಪರಿವರ್ತನೆ ಮಾಡಿದರು.ತರುವಾಯ, ಸದರಿ ಮುನಿಸ್ವಾಮಿಗೌಡರವರು,ದಿನಾಂಕ: 06-12-1989 ರ ನೋಂದಾಯಿತ ಮಾರಾಟ ಪತ್ರದ ಪ್ರಕಾರ ಲೆಫ್ಟಿನೆಂಟ್ ಕರ್ನಲ್ ಎ. ಗೋಪಾಲನ್ ಎಂಬುವವರಿಗೆ 4 ಎಕರೆಗಳ ಭೂಮಿಯನ್ನು ಮಾರಾಟ ಮಾಡಿದರು.

3. ಸದರಿ ಲೆಫ್ಟಿನೆಂಟ್ ಕರ್ನಲ್ ಎ. ಗೋಪಾಲನ್ (ನಿವೃತ್ತ) ಇವರು ಒಂದು ಕೈಗಾರಿಕೆಯನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ (ಇಲ್ಲಿ ಸಂಕ್ಷಿಪ್ತತೆಗಾಗಿ ' ಕೆಎಸ್ಎಫ್ ' ಎಂದು ಉಲ್ಲೇಖಿಸಲಾಗಿದೆ) ಸಾಲವನ್ನು ಪಡೆದಿದ್ದಾರೆ ಎಂಬುದು ಅರ್ಜಿದಾರರ ಈ ಮುಂದಿನ ಮೊಕದ್ದಮೆಯಾಗಿರುತ್ತದೆ.ಲೆಫ್ಟಿನೆಂಟ್ ಕರ್ನಲ್ ಎ. ಗೋಪಾಲನ್ರವರು ಸಾಲದ ಮೊಬಲಗನ್ನು ಪಾವತಿಸುವಲ್ಲಿ ವಿಫಲರಾದರು.ಆದ್ದರಿಂದ, ಕೆಎಸ್ಎಫ್ ಯು 4 ಎಕರೆಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದನ್ನುದಿನಾಂಕ: 17-03-2004 ರ ನೋಂದಾಯಿತ ಮಾರಾಟ ಪತ್ರದ ಮೇರೆಗೆ ಶಾರದಮ್ಮ ಎಂಬೊಬ್ಬರಿಗೆ ಮಾರಾಟ ಮಾಡಿತು.ತದನಂತರ, ಶಾರದಮ್ಮನವರು,ದಿನಾಂಕ: 27-12-2004 ರ ನೋಂದಾಯಿತ ಮಾರಾಟ ಪತ್ರದ ಪ್ರಕಾರ ಸದರಿ ಸ್ವತ್ತನ್ನು ವೈ, ಬಾಲರಾಜು ಎಂಬುವವರಿಗೆ ಮಾರಾಟ ಮಾಡಿದರು.

4. ಅರ್ಜಿದಾರರ ತಂದೆ ಮುನಿಸ್ವಾಮಿಗೌಡರವರು ಅವರ ಉಳಿಕೆ ಆಸ್ತಿಗೆ ಅವರನ್ನು (ಅರ್ಜಿದಾರರು) ಉತ್ತರಾಧಿ ಕಾರಿಯಾಗಿ ಬಿಟ್ಟುದಿನಾಂಕ: 07-02-1998 ರಂದು ನಿಧನರಾದರು ಎಂಬುದು ಅರ್ಜಿದಾರರ ಮುಂದಿನ ವಾದವಾಗಿದೆ.ಉಳಿಕೆ ಎರಡು ಎಕರೆಗಳ ಭೂಮಿಗೆ ಸಂಬಂಧಪಟ್ಟಂತೆ, ಕಂದಾಯ ನಮೂದುಗಳಲ್ಲಿ ಎಂಆರ್ಸಂಖ್ಯೆ: 12/2004-05 ರಲ್ಲಿ ಅರ್ಜಿದಾರರ ಹೆಸರಿನಲ್ಲಿ ನಮೂದಾಗಿದೆ.ಅನುಬಂಧ-ಯು ಪ್ರಕಾರ ಉಳಿಕೆ ಜಮೀನನ್ನು ಪರಿವರ್ತನೆಯ ನಮೂದನ್ನು ತೋರಿಸುವ ಮೂಲಕ ಎಂ.ಆರ್. ಸಂಖ್ಯೆ.2/2007-08 ರಲ್ಲಿ ಅರ್ಜಿದಾರರ ಹೆಸರಿನಲ್ಲಿ ಸದರಿ ಎರಡು ಎಕರೆಗಳ ಭೂಮಿಯ ಮತ್ತಷ್ಟು ಹಕ್ಕು ಬದಲಾವಣೆಯನ್ನು ತಹಶೀಲ್ದಾರ್ ರವರು ಹೊರಡಿಸಿ ನೀಡಿದ್ದಾರೆ.

5. ವಿಷಯ ಹೀಗಿರುವಾಗ, 2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು,ದಿನಾಂಕ: 24-12-2008 ರ ತಹಶೀಲ್ದಾರರ ವರದಿಯ ಆಧಾರದ ಮೇಲೆ ಈ ಅಧಿನಿಯಮದ ಪ್ರಕರಣ 136 ( 3) ರ ಉಪಬಂಧಗಳ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಿದರು.ಜಿಲ್ಲಾಧಿಕಾರಿಗಳು ನೀಡಿದ ನೋಟೀಸಿಗೆ ಪ್ರತ್ಯುತ್ತರವಾಗಿ ಅರ್ಜಿದಾರರು,ದಿನಾಂಕ: 07-01-2010 ರಂದು ವಿವರವಾದ ಆಕ್ಷೇಪಣೆಗಳನ್ನು ಸಲ್ಲಿಸಿ, ದರಖಾಸ್ತಿನ ನೋಂದಾಯಿತ ಪ್ರತಿಗಳನ್ನು, ಸಾಗುವಳಿ ಚೀಟಿ ಉದ್ಧೃತ ಭಾಗವನ್ನು, ಹಕ್ಕುಪತ್ರಗಳ ದಾಖಲೆಯನ್ನು, ಹಲವಾರು ಮಾರಾಟ ಪತ್ರಗಳನ್ನು, ಹಕ್ಕು ಬದಲಾವಣೆಯ ನೋಂದಾಯಿತ ಉದ್ಧೃತ ಭಾಗದ ಪ್ರಮಾಣಿತ

ಪ್ರತಿಗಳನ್ನು ಮತ್ತು ಆರ್.ಟಿ.ಸಿ. ಉದ್ಧೃತ ಭಾಗಗಳನ್ನು, ಕೃಷಿಯೇತರ/ಕೈಗಾರಿಕಾ ಉದ್ದೇಶ ಮೊದಲಾದವುಗಳಿಗಾಗಿ ಭೂ ಪರಿವರ್ತನೆಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ನೀಡಿದದಿನಾಂಕ: 25-11-1989ರ ಕಚೇರಿ ಜ್ಞಾಪನ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದಾರೆ.ಮತ್ತು ಅವರು, ತನ್ನ ತಂದೆ-ಮುನಿಸ್ವಾಮಿಗೌಡ ರವರುದಿನಾಂಕ: 25-11-1989 ರಂದು 6 ಎಕರೆಗಳ ಭೂಮಿಯ ಪೈಕಿ 4 ಎಕರೆಗಳ ಭೂಮಿಗೆ ಮಾತ್ರ ಪರಿವರ್ತನೆಯನ್ನು ಪಡೆದುಕೊಂಡಿದ್ದಾರೆಂದು ಮತ್ತು ಉಳಿಕೆ ಎರಡು ಎಕರೆಗಳ ಭೂಮಿಯು ಹಾಗೆಯೇ ಉಳಿದುಕೊಂಡಿದೆಯೆಂದು ಮತ್ತು ವ್ಯವಹರಣೆಗಳನ್ನು ಬಿಟ್ಟುಬಿಡಲು ಕೋರಲಾಗಿದೆಯೆಂದು ವಾದಿಸಿದ್ದಾರೆ.ಜಿಲ್ಲಾಧಿಕಾರಿಗಳು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಉದ್ದೇಶಿಸಲಾದಂಥ ಯಾವುದೇ ವಿಚಾರಣೆಯನ್ನು ನಡೆಸದೆ, ಪ್ರಶ್ನಿತ ಆದೇಶದ ಮೂಲಕದಿನಾಂಕ: 31-07-2007 ರ ಎಂ.ಆರ್.ಸಂಖ್ಯೆ:2/2007-08 ರಲ್ಲಿ ಖಾತಾವನ್ನು ರದ್ದುಗೊಳಿಸಿದ್ದಾರೆ ಮತ್ತು 6 ಎಕರೆಗಳ ಭೂಮಿಯನ್ನು ರಾಜ್ಯ ಸರ್ಕಾರದಲ್ಲಿ ನಿಹಿತಗೊಳಿಸಿರುತ್ತಾರೆ.ಹಾಗಾಗಿ, ಪ್ರಸ್ತುತ ರಿಟ್ ಅರ್ಜಿಯನ್ನು, ಪರಿಹಾರ ಕೋರಿ ಸಲ್ಲಿಸಲಾಗಿರುತ್ತದೆ.

6. ಎದುರುದಾರ-ರಾಜ್ಯ ಸರ್ಕಾರವು ಆಕ್ಷೇಪಣೆಗಳ ಹೇಳಿಕೆಯ ವಿವರಪಟ್ಟಿಯನ್ನು ಸಲ್ಲಿಸಿಲ್ಲ.

7. ದಾವೆ ಹೂಡಿದ ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ನಾನು ಆಲಿಸಿದ್ದೇನೆ.

II.ಅರ್ಜಿದಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದಗಳು

8. 48 ವರ್ಷಗಳಿಗಿಂತ ಹೆಚ್ಚು ಕಾಲ ಗತಿಸಿಹೋದ ತರುವಾಯ, ರಾಜ್ಯ ಸರ್ಕಾರದಲ್ಲಿ ಅರ್ಜಿದಾರರ ಭೂಮಿಯನ್ನು ನಿಹಿತಗೊಳಿಸಿ, ಈ ಅಧಿನಿಯಮದ 136 ( 3) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ 2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು ತಮ್ಮ ಅಧಿಕಾರಗಳನ್ನು ಚಲಾಯಿಸುವ ಮೂಲಕ ಈ ಪ್ರಶ್ನಿತ ಆದೇಶವನ್ನು ಹೊರಡಿಸಿರುವುದು ಅಸಮಂಜಸವಾಗಿರುತ್ತದೆ ಮತ್ತು ಇದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲವೆಂದು ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಎಂ.ಎ. ಸಬಾಸ್ಟಿಯನ್ ರವರು ಬಲವಾಗಿ ವಾದಿಸಿದ್ದಾರೆ.ಎರಡು ನೋಂದಾಯಿತ ಮಾರಾಟ ಪತ್ರಗಳ ಅಡಿಯಲ್ಲಿ ಅರ್ಜಿದಾರರ ತಂದೆಯು 6 ಎಕರೆಗಳ ಭೂಮಿಯನ್ನು ಖರೀದಿಸಿದ್ದಾರೆ.ಅದರ ಪೈಕಿ 4 ಎಕರೆಗಳ ಭೂಮಿಯನ್ನುದಿನಾಂಕ: 25-11-1989ರ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಕೃಷಿಯೇತರ ಉದ್ದೇಶಗಳಿಗಾಗಿ ಈಗಾಗಲೇ ಪರಿವರ್ತನೆ ಮಾಡಲಾಗಿದೆ ಮತ್ತು ವ್ಯವಹರಣೆಗಳನ್ನು ಪ್ರಾರಂಭಿಸಿದ್ದಾಗ, ಭೂಮಿಯು, ಕೃಷಿ ಭೂಮಿಯಾಗಿರಲಿಲ್ಲ, ಮತ್ತು ಜಿಲ್ಲಾಧಿಕಾರಿಗಳು ಪರಿವರ್ತಿಸಲಾದ ಭೂಮಿಗೆ ಸಂಬಂಧಿಸಿದಂತೆ ಅಧಿನಿಯಮದ 136 ( 3) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಲು ಯಾವುದೇ ಅಧಿಕಾರ ಹೊಂದಿರುವುದಿಲ್ಲ.ಈ ಆಧಾರದ ಮೇಲೂ ಸಹ, ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲು ಅರ್ಹವಾಗಿರುತ್ತದೆಂದು ಅವರು ವಾದಿಸಿದ್ದಾರೆ.

9. ಮುಂದುವರೆಸುತ್ತಾ,ದಿನಾಂಕ: 14-11-1962 ರಂದು, ವಿಭಾಗಾಧಿಕಾರಿಗಳು ರಾಜಕೀಯ ಸಂತ್ರಸ್ತರಾಗಿದ್ದ ರಾಮಮೂರ್ತಿಗೆ ಅರೆಬಿನ್ನಮಂಗಲ ಗ್ರಾಮದ ಸರ್ವೇ ಸಂಖ್ಯೆ -1 ರಲ್ಲಿ 6 ಎಕರೆಗಳ ಭೂಮಿಯನ್ನು ಮಂಜೂರು ಮಾಡಿದ್ದಾರೆ.ಮತ್ತು ಅವರ ಮರಣದ ನಂತರ, 1983 ರಲ್ಲಿ, ಆತನ ಪತ್ನಿ ಪುರುಷೋತ್ತಮ ಎಂಬುವವರಿಗೆ 3 ಎಕರೆಗಳ ಭೂಮಿಯನ್ನು ಮತ್ತು ಉಳಿದ ಮೂರು ಎಕರೆಗಳ ಭೂಮಿಯನ್ನು ಯಶೋಧಮ್ಮ ಎಂಬುವವರಿಗೆ

ಮಾರಾಟ ಮಾಡಿದ್ದಾರೆ.ತರುವಾಯ ಯಶೋಧಮ್ಮ ಮತ್ತು ಪುರುಷೋತ್ತಮ ರವರುದಿನಾಂಕ: 17-03-1989 ರ ಎರಡು ನೋಂದಾಯಿತ ಮಾರಾಟ ಪತ್ರಗಳ ಪ್ರಕಾರ ಅರ್ಜಿದಾರರ ತಂದೆಯ ಹೆಸರಿನಲ್ಲಿ ಭೂಮಿಯನ್ನು ಪುತಿಯಾಗಿ ಮಾರಾಟ ಮಾಡಿದ್ದಾರೆ.1962 ರಿಂದ ಇಲ್ಲಿಯವರೆಗೆ, ವಿವಿಧ ವ್ಯಕ್ತಿಗಳು ವಿವಿಧ ಮಾರಾಟ ಪತ್ರಗಳನ್ನು ಬರೆಸಿದ್ದಾರೆ.ಪ್ರಾರಂಭದಲ್ಲಿ, ಕಂದಾಯ ನಮೂದುಗಳು ಮೂಲ ಮಂಜೂರಾತಿದಾರನ ಹೆಸರಿನಲ್ಲಿ ಇದ್ದವು ಮತ್ತು ತರುವಾಯ ಆತನ ಪತ್ನಿ-ಕಮಲಮ್ಮ ರವರ ಹೆಸರಿನಲ್ಲಿ ಮತ್ತು ತದನಂತರ, ಪುರುಷೋತ್ತಮ್ ಮತ್ತು ಯಶೋಧಮ್ಮ ರವರ ಹೆಸರಿನಲ್ಲಿ ಮತ್ತು ಅವರ ನಂತರ ನೋಂದಾಯಿತ ಮಾರಾಟ ಪತ್ರಗಳ ಆಧಾರದ ಮೇಲೆ ಅರ್ಜಿದಾರರ ತಂದೆಯ ಹೆಸರಿನಲ್ಲಿ ವರ್ಗಾಯಿಸಲಾಯಿತು.ಸದರಿ ಸಾಕ್ಷ್ಯಾಧಾರಗಳನ್ನು ಪ್ರಶ್ನಿತ ಆದೇಶದಲ್ಲಿ ಸರಿಯಾದ ದೃಷ್ಟಿಕೋನದಲ್ಲಿ 2 ನೇ ಎದುರುದಾರರು ಪರಿಗಣಿಸಿಲ್ಲ ಎಂದು ವಾದಿಸಿದ್ದಾರೆ.

10. ಪ್ರಸ್ತುತ ಅರ್ಜಿದಾರರುದಿನಾಂಕ: 07-01-2010 ರಂದು ಭೂ ಪರಿವರ್ತನೆಗೆ ಸಂಬಂಧಪಟ್ಟ ದಾಖಲೆಗಳು ಮೊದಲಾದವುಗಳೊಂದಿಗೆ ಜಿಲ್ಲಾಧಿಕಾರಿಗಳ ಮುಂದೆ ಆಕ್ಷೇಪಣೆಗಳನ್ನು ಸಲ್ಲಿಸಿದರೂ, 2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು ತಪ್ಪಾಗಿ ರಾಜ್ಯ ಸರ್ಕಾರದಲ್ಲಿ ಭೂಮಿಯನ್ನು ನಿಹಿತಗೊಳಿಸಲು ಮುಂದಾಗಿದ್ದುದು, ಇದನ್ನು ಅನುಮತಿಸಲಾಗುವುದಿಲ್ಲವೆಂದು ಅರ್ಜಿದಾರರ ಪರ ಮಾನ್ಯ ವಕೀಲರು ಮತ್ತಷ್ಟು ವಾದಿಸಿದ್ದಾರೆ.ಈ ಆಧಾರದ ಮೇಲೂ ಸಹ, ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲು ಅರ್ಹವಾಗಿರುತ್ತದೆ.ಆದ್ದರಿಂದ ಅವರು ರಿಟ್ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

III.ಮಾನ್ಯ ಎ.ಜಿ.ಎ (ಹೆಚ್ಚುವರಿ ಸರ್ಕಾರಿ ವಕೀಲರು) ಮಂಡಿಸಿದ ವಾದಗಳು

11. ಇದಕ್ಕೆ ತದ್ವಿರುದ್ಧವಾಗಿ, ಶ್ರೀಮತಿ ಎಂ.ಸಿ. ನಾಗಶ್ರೀ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಇವರು, 2 ನೇ ಎದುರುದಾರರು ಹೊರಡಿಸಿದ ಪ್ರಶ್ನಿತ ಆದೇಶವನ್ನು ಸಮರ್ಥಿಸಲು ಕೋರುತ್ತಾ, ಅರ್ಜಿದಾರರಿಗೆ 2 ನೇ ಎದುರುದಾರರು ನೋಟೀಸನ್ನು ನೀಡಿದ್ದರೂ, 1962 ರಲ್ಲಿ ಉಚಿತವಾಗಿ ರಾಮಮೂರ್ತಿಯವರಿಗೆ ಮತ್ತು ಇತರರಿಗೆ (ಒಟ್ಟು 16 ವ್ಯಕ್ತಿಗಳು) ಭೂಮಿಯನ್ನು ನೀಡಲಾಗಿತ್ತು ಎಂದು ತೋರಿಸಲು ಯಾವುದೇ ಸಂಬಂಧಪಟ್ಟ ದಸ್ತಾವೇಜುಗಳನ್ನು ಅರ್ಜಿದಾರರು ಹಾಜರುಪಡಿಸಿಲ್ಲ ಎಂದು ಅವರು ವಾದಿಸಿದ್ದಾರೆ.ಮುಂದುವರೆಸುತ್ತಾ, ಸದರಿ ರಾಮಮೂರ್ತಿಯವರಿಗೆ ಮತ್ತು ಇತರರಿಗೆ ಭೂಮಿಯನ್ನು ನೀಡಲಾಗಿದೆ ಎಂದು ತೋರಿಸಲು ದಾಖಲೆಗಳು ಸಹ ಲಭ್ಯವಿಲ್ಲವೆಂದು ಅವರು ವಾದಿಸಿದ್ದಾರೆ.ಅಲ್ಲದೆ,ದಿನಾಂಕ: 24-12-2008 ರಂದು ತಹಶೀಲ್ದಾರರು ಸಲ್ಲಿಸಿದ ವರದಿ ಮತ್ತು ಕರ್ನಾಟಕ ಸಾರ್ವಜನಿಕ ಭೂ ನಿಗಮದ ಕಾರ್ಯದರ್ಶಿಯವರು ನೀಡಿದ ಕಚೇರಿ ಟಿಪ್ಪಣಿಯ ಆಧಾರದ ಮೇಲೆ, 2 ನೇ ಎದುರುದಾರರು ವ್ಯವಹರಣೆಗಳನ್ನು ಪ್ರಾರಂಭಿಸಿದ್ದರು ಎಂದು ವಾದಿಸಿದ್ದಾರೆ.ಅರ್ಜಿದಾರರು ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದುದರಿಂದ ಮತ್ತು ದಾಖಲೆಗಳು ಅಲಭ್ಯವಾಗಿದ್ದುದರಿಂದ, 2 ನೇ ಎದುರುದಾರರು-ವಿಶೇಷ ಜಿಲ್ಲಾಧಿಕಾರಿಗಳು, ಅರೆಬಿನ್ನಮಂಗಲ ಗ್ರಾಮದ ಸರ್ವೇ ಸಂಖ್ಯೆ -1 ರಲ್ಲಿ 6 ಎಕರೆಗಳು ಭೂಮಿಯನ್ನು ರಾಜ್ಯ ಸರ್ಕಾರದಲ್ಲಿ ನಿಹಿತಗೊಳಿಸಿ ಪ್ರಶ್ನಿತ ಆದೇಶವನ್ನು ಹೊರಡಿಸಿರುವುದನ್ನು ಸಮರ್ಥಿಸಿಕೊಳ್ಳಲಾಗಿರುತ್ತದೆ.ಆದ್ದರಿಂದ, ಅವರು ರಿಟ್ ಅರ್ಜಿಯನ್ನು ವಜಾಗೊಳಿಸಲು ಕೋರಿರುತ್ತಾರೆ.

IV.ನಿರ್ಣಯದ ಅಂಶ •

12. ಪಕ್ಷಕಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದ ವಿವಾದಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ರಿಟ್ ಅರ್ಜಿಯಲ್ಲಿ ಪರಿಗಣನೆಗೆ ಉದ್ಭವಿಸಿರುವ ಏಕೈಕ ಅಂಶವು ಈ ಮುಂದಿನಂತಿರುತ್ತದೆ:

2 ನೇ ಎದುರುದಾರ-ವಿಶೇಷ ಜಿಲ್ಲಾಧಿ ಕಾರಿಗಳು, 48 ವರ್ಷಗಳಿಗಿಂತ ಹೆಚ್ಚಿನ ಕಾಲದ ತರುವಾಯ, ಮೊಕದ್ದಮೆಯ ವಾಸ್ತವ ಸಂಗತಿಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ, ಪ್ರಶ್ನಿತ ಭೂಮಿಯನ್ನು,ದಿನಾಂಕ: 25-11-1989 ರಂದು ಕೃಷಿಯೇತರ/ಕೈಗಾರಿಕಾ ಉದ್ದೇಶಗಳಿಗಾಗಿ ನಿಕಟ ವಿಶೇಷ ಜಿಲ್ಲಾಧಿಕಾರಿಗಳು ಪರಿವರ್ತಿಸಿದ್ದಾಗ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ 136 ( 3) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ವ್ಯವ ಹ ರ ಣೆ ಗಳನ್ನು ಪ್ರಾರ ಂ ಬಿ ಸಿರುವುದು ಸಮರ್ಥನೀಯವಾಗಿದೆಯೇ?

V.ಪರಿಗಣನೆ

13. ಪಕ್ಷಕಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದ-ವಿವಾದಗಳನ್ನು ನಾನು ಗಂಭೀರವಾಗಿ ಪರಿಗಣಿಸಿರುತ್ತೇನೆ ಮತ್ತು ದಾಖಲೆಯಲ್ಲಿನ ಇಡೀ ಸಾಕ್ಷ್ಯಾಧಾರಗಳನ್ನು ಜಾಗರೂಕತೆಯಿಂದ ಪರಿಶೀಲಿಸಿದ್ದೇನೆ.

14. ಮಂಜೂರಾತಿ ಆದೇಶ ಆದೇಶಸಂಖ್ಯೆ: ಎಲ್ಎನ್ಡಿ.ಎಸ್ಆರ್/1-551/1960-61,ದಿನಾಂಕ: 14-11-1962 ರ ಮೇರೆಗೆ ರಾಜಕೀಯ ಸಂತ್ರಸ್ಥರಾಗಿದ್ದ ಶ್ರೀ ಎಂ. ರಾಮಮೂರ್ತಿ ಎಂಬೊಬ್ಬರಿಗೆ ಅರೆಬಿನ್ನಮಂಗಲ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು (ಹಿಂದಿನ ದೇವನಹಳ್ಳಿ ತಾಲ್ಲೂಕು), ಸರ್ವೇ ಸಂಖ್ಯೆ .1 ರಲ್ಲಿ 6 ಎಕರೆಗಳ ಭೂಮಿಯನ್ನು ವಿಭಾಗಾಧಿಕಾರಿಗಳು ಮಂಜೂರು ಮಾಡಿದ್ದು, ಅದಕ್ಕೆ ಅವರ ಹೆಸರಿನಲ್ಲಿ ಸಾಗುವಳಿ ಚೀಟಿಯನ್ನು ಸಹ ನೀಡಲಾಗಿತ್ತು ಎಂಬುದು ಅರ್ಜಿದಾರರ ನಿರ್ದಿಷ್ಟ ವಾದವಾಗಿರುತ್ತದೆ.ಒಟ್ಟಾರೆಯಾಗಿ, 16 ವ್ಯಕ್ತಿಗಳಿಗೆ ಸದರಿ ಸರ್ವೇ ಸಂಖ್ಯೆ .1 ರಲ್ಲಿ ತಲಾ 6 ಎಕರೆಗಳ ಭೂಮಿಯನ್ನು ಮಂಜೂರು ಮಾಡಲಾಗಿತ್ತು.ಕಂದಾಯದ ಎಲ್ಲಾ ದಾಖಲೆಗಳು, ಸದರಿ ರಾಮಮೂರ್ತಿಯವರ ಹೆಸರಿನಲ್ಲಿ ದಾಖಲಾಗಿದ್ದವು.ಸದರಿ ಶ್ರೀ ರಾಮಮೂರ್ತಿಯವರ ಮರಣದ ತರುವಾಯ, ಆತನ ಪತ್ನಿ-ಕಮಲಮ್ಮ ಆತನ ಸ್ವತ್ತಿಗೆ ಉತ್ತರಾಧಿಕಾರಿಯಾದರು ಮತ್ತು ಆಕೆಯ ಹೆಸರನ್ನು ಎಲ್ಲಾ ಕಂದಾಯ ದಾಖಲೆಗಳಲ್ಲಿ ನಮೂದು ಮಾಡಲಾಯಿತು.ಅದರ ತರುವಾಯ, ರಾಮಮೂರ್ತಿಯವರ ಪತ್ನಿಯಾದ ಕಮಲಮ್ಮ ಇವರು,ದಿನಾಂಕ: 23-02-1983 ರ ಎರಡು ಪ್ರತ್ಯೇಕ ನೋಂದಾಯಿತ ಮಾರಾಟ ಪತ್ರಗಳನ್ನು ಬರೆಸುವ ಮೂಲಕ ಪುರುಷೋತ್ತಮ್ ಎಂಬೊಬ್ಬರ ಹೆಸರಿನಲ್ಲಿ 3 ಎಕರೆಗಳ ಭೂಮಿಯನ್ನು ಮತ್ತು ಯಶೋಧಮ್ಮ ರವರ ಹೆಸರಿನಲ್ಲಿ ಇನ್ನುಳಿದ ಮೂರು ಎಕರೆಗಳ ಭೂಮಿಯನ್ನು, ಮಾರಾಟ ಮಾಡಿದರು.ಸದರಿ ಪುರುಷೋತ್ತಮ್ ಮತ್ತು ಯಶೋಧಮ್ಮ ರವರು ಪ್ರತಿಯಾಗಿ, ತಮ್ಮ ತಮ್ಮ ಮೂರು ಎಕರೆಗಳ ಭೂಮಿಯನ್ನು ಮೌಲ್ಯಯುತ ಪರಿಗಣನೆಗಾಗಿದಿನಾಂಕ: 17-03-1989 ರ ಎರಡು ನೋಂದಾಯಿತ ಮಾರಾಟ ಪತ್ರಗಳಲ್ಲಿ ಅರ್ಜಿದಾರರ ತಂದೆ ಮುನಿಸ್ವಾಮಿಗೌಡ ಎಂಬುವರ ಹೆಸರಿನಲ್ಲಿ ಮಾರಾಟ ಮಾಡಿದರು ಎಂಬುದು ಅಲ್ಲಿ ವಿವಾದವಾಗಿರಲಿಲ್ಲ.ಸದರಿ ಮುನಿಸ್ವಾಮಿಗೌಡರವರ ಜೀವಿತಾವಧಿಯಲ್ಲಿ, ಅವರು ಕೃಷಿಯೇತರ/ಕೈಗಾರಿಕಾ ಉದ್ದೇಶಗಳಿಗಾಗಿ 4 ಎಕರೆಗಳ ಭೂಮಿಯನ್ನು ಪರಿವರ್ತನೆ ಮಾಡಿಸುವುದಕ್ಕಾಗಿ ಅರ್ಜಿ ಸಲ್ಲಿಸಿದ್ದರು.ಮತ್ತು ಜಿಲ್ಲಾಧಿಕಾರಿಗಳು, ಈ ಅಧಿನಿಯಮದ 95 ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ತಮ್ಮ ಅಧಿಕಾರಗಳನ್ನು ಚಲಾಯಿಸಿ,ದಿನಾಂಕ: 25-11-1989 ರಂದು ಕೃಷಿಯೇತರ/ಕೈಗಾರಿಕಾ ಉದ್ದೇಶಗಳಿಗಾಗಿ 4 ಎಕರೆಗಳ ಭೂಮಿಯನ್ನು ಪರಿವರ್ತನೆ ಮಾಡಲು ಮಂಜೂರಾತಿ ನೀಡಿದ್ದರು.ದಿನಾಂಕ: 25-11-1989 ರಂದು ಜಿಲ್ಲಾಧಿಕಾರಿಗಳು ಹೊರಡಿಸಿದ ಸದರಿ ಆದೇಶವು ಅಂತಿಮ ರೂಪ ಪಡೆಯಿತು ಎಂಬುದು ಸಹ ನಿರ್ವಿವಾದವಾಗಿದೆ.ಪರಿವರ್ತನೆ ಮಾಡಲಾದ ಸದರಿ 4

ಎಕರೆಗಳ ಭೂಮಿಯನ್ನು, ಮೌಲ್ಯಯುತ ಪರಿಗಣನೆಗಾಗಿ ರೂ .1,40,000/-ಗಳಿಗೆದಿನಾಂಕ: 06-12-1989 ರ ನೋಂದಾಯಿತ ಮಾರಾಟ ಪತ್ರದಲ್ಲಿ ಲೆಫ್ಟಿನೆಂಟ್ ಕರ್ನಲ್ ಎ. ಗೋಪಾಲನ್ ರವರ ಹೆಸರಿಗೆ ಅರ್ಜಿದಾರರ ತಂದೆಯು ಮಾರಾಟ ಮಾಡಿದರು ಎಂಬುದು ಸಹ ನಿರ್ವಿವಾದ.

15. ಲೆಫ್ಟಿನೆಂಟ್ ಕರ್ನಲ್ ಎ. ಗೋಪಾಲನ್ ರವರು ವಿ. ರಾಜೀವ್ ಎಂಬೊಬ್ಬರ ಜೊತೆಯಲ್ಲಿ ಇತರ ವಿಷಯಗಳ ಜೊತೆಗೆ ರೂ. 11,00,000/-ಗಳ ಸಾಲವನ್ನು ಮತ್ತು ಮೆಸರ್ಸ್ ಗಣೇಶ್ ಚೇಂಬರ್ ಬ್ರಿಕ್ಸ್ನ ಪಾಲುದಾರರಾದ ಲೆಫ್ಟಿನೆಂಟ್ ಕರ್ನಲ್ ಎ. ಗೋಪಾಲನ್ (ನಿವೃತ್ತ) ಮತ್ತು ಶ್ರೀ ವಿ. ರಾಜೀವ್ ರವರು ಪ್ರತಿನಿಧಿಸಿರುವ ಸದರಿ ಕಂಪನಿಯಿಂದ ಸಾಲವಾಗಿ ಪಡೆದ ರೂ. 3,00,000/-ಗಳ ಹೆಚ್ಚುವರಿ ಕಾಲಾವಧಿಯ ಸಾಲವನ್ನು ಮರುಪಾವತಿ ಮಾಡಲು ಸಹ ಭದ್ರತೆಯಾಗಿ ಕೆಎಸ್ಎಫ್ಸಿಯ ಹೆಸರಿನಲ್ಲಿ ಈ ಹಿಂದೆ ಹೇಳಲಾದ ಭೂಮಿಯ ಹಕ್ಕುಪತ್ರಗಳನ್ನು ಠೇವಣಿಯಾಗಿ ಇಡುವ ಮೂಲಕ ನ್ಯಾಯಸಮ್ಮತ ಅಡಮಾನವನ್ನು ಸೃಷ್ಟಿಸಿರುವುದು ಸಹ ಇಲ್ಲಿ ವಿವಾದದಲ್ಲಿರುವುದಿಲ್ಲ.ಮೇಲೆ ಒಪ್ಪಿಕೊಂಡಂಥ ಸಾಲದ ಕಂತುಗಳನ್ನು ಪಾವತಿಸದ ಕಾರಣವಾಗಿ, ಕೆಎಸ್ಎಫ್ಸಿಯು ರಾಜ್ಯ ಹಣಕಾಸು ನಿಗಮಗಳ ಅಧಿನಿಯಮ, 1951 ರ 29 ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಿ,ದಿನಾಂಕ: 13-10-2010 ರಂದು ಸಂಸ್ಥೆಯ ಅಡಮಾನ/ಆಧಾರವಾಗಿ ಇಡಲಾದ ಸ್ವತ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡಿತು.ತರುವಾಯ, ಕೆಎಸ್ಎಫ್ಸಿಯು, ರೂ. 11,00,000/-ಗಳನ್ನು ಮೌಲ್ಯಯುತ ಪರಿಗಣನೆಗಾಗಿದಿನಾಂಕ: 17-03-2004 ರ ನೋಂದಾಯಿತ ಮಾರಾಟ ಪತ್ರದ ಪ್ರಕಾರ ಶ್ರೀಮತಿ ಕೆ. ಶಾರದಮ್ಮ ರವರಿಗೆ ಪರಿವರ್ತನೆ ಮಾಡಲಾದ ಸದರಿ 4 ಎಕರೆಗಳ ಭೂವಿಯನ್ನು ಮಾರಾಟ ಮಾಡಿತು.ಕೆಎಸ್ಎಫ್ಸಿಯು ಮಾಡಿದ ಸದರಿ ಮಾರಾಟವು ಅಂತಿಮ ರೂಪ ಪಡೆಯಿತು.ಅದರ ತರುವಾಯ, ಶಾರದಮ್ಮ ರವರುದಿನಾಂಕ: 27-12-2004 ರ ನೋಂದಾಯಿತ ಮಾರಾಟ ಪತ್ರದ ಅಡಿಯಲ್ಲಿ ವೈ. ಬಾಲರಾಜು ರವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿದರು.

16. ಕೆಎಸ್ಎಫ್ಸಿಯು ರಾಜ್ಯ ಸರ್ಕಾರದ ಅಧೀನ ಸಂಸ್ಥೆಯೆಂಬುದು ಒಪ್ಪಿತ ಸಂಗತಿಯಾಗಿರುತ್ತದೆ.ವಿಷಯ ಹೀಗಿರುವಾಗ, 2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು,ದಿನಾಂಕ: 24-12-2008 ರಂದು ತಹಶೀಲ್ದಾರರ ವರದಿಯ ಆಧಾರದ ಮೇಲೆ ಮತ್ತು ಕರ್ನಾಟಕ ಸಾರ್ವಜನಿಕ ಭೂ ನಿಗಮದ ಕಾರ್ಯದರ್ಶಿಯವರು ನೀಡಿದ ಕಚೇರಿ ಟಿಪ್ಪಣಿಯ ಆಧಾರದ ಮೇಲೆ 48 ವರ್ಷಗಳಿಗಿಂತ ಹೆಚ್ಚು ಕಾಲ ಗತಿಸಿಹೋದ ತರುವಾಯ ಅಧಿನಿಯಮದ 136 ( 3) ನೇ ಪ್ರಕರಣದ ಚ ಉಪಬಂಧಗಳ ಅಡಿಯಲ್ಲಿ ಕಾಲವಿಳಂಬವಾಗಿ ವ್ಯವಹರಣೆಗಳನ್ನು ಪ್ರಾರಂಭಿಸಿರುವುದು ತುಂಬಾ ಆಶ್ಚರ್ಯಕರವಾಗಿದೆ.2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು ನೀಡಿದ ನೋಟೀಸಿಗೆ ಪ್ರತಿಕ್ರಿಯೆಯಾಗಿ ಅರ್ಜಿದಾರರು-ಅರ್ಜಿದಾರರ ತಂದೆ ಮುನಿಸ್ವಾಮಿಗೌಡರವರುದಿನಾಂಕ: 25-11-1989 ರ ಅನುಬಂಧ-ಪಿ ಪ್ರಕಾರ 6 ಎಕರೆಗಳ ಭೂಮಿಯ ಪೈಕಿ 4 ಎಕರೆ ಭೂಮಿಯನ್ನು ಪರಿವರ್ತನೆ ಮಾಡಿಸಿದ್ದರೆಂದು ಮತ್ತು ಎರಡು ಎಕರೆಗಳ ಭೂಮಿಯನ್ನು ಹಾಗೆಯೇ ಉಳಿಸಿಕೊಂಡಿದ್ದಾರೆಂದುದಿನಾಂಕ: 07-01-2010 ರಂದು ಸವಿವರವಾದ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ, ಮತ್ತು ಈ ಸಂಬಂಧವಾಗಿ ಪ್ರಾರಂಭಿಸಲಾದ ವ್ಯವಹರಣೆಗಳನ್ನು ಕೈಬಿಡುವಂತೆ ಅರ್ಜಿದಾರರು ಪ್ರಾರ್ಥಿಸಿರುತ್ತಾರೆ.ತಮ್ಮ ಆಕ್ಷೇಪಣೆಗಳೊಂದಿಗೆ, ಅರ್ಜಿದಾರರು, 2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳ ಮುಂದೆ ಈ ಮುಂದಿನ ದಸ್ತಾವೇಜುಗಳನ್ನು ಹಾಜರುಪಡಿಸಿದ್ದಾರೆ.

( ಎ) ಸ್ವಾಧೀನಕ್ಕೆ ಸಂಬಂಧಿಸಿದಂತೆ ಭೂಮಿಗಳ ದರಖಾಸ್ತು ನೋಂದಣಿಯ ಪ್ರಮಾಣಿತ ಪ್ರತಿ ಮತ್ತು ಆ ಕುರಿತು ತೆಗೆದುಕೊಂಡ ಕ್ರಮದ ಬಗ್ಗೆ ವಿಭಾಗಾಧಿ ಕಾರಿಗಳು, ದೊಡ್ಡಬಳ್ಳಾಪುರ ಉಪ-ವಿಭಾಗ, ದೊಡ್ಡ ಬಳ್ಳಾಪುರ ಇವರು ನೀಡಿದ ಪ್ರಮಾಣಿತ ಪ್ರತಿ.

(ಬಿ) ದೇವನಹಳ್ಳಿ ತಾಲ್ಲೂಕಿನ ತಹಶೀಲ್ದಾರರು ನೀಡಿದ ಸಾಗುವಳಿ ಭೂಮಿಗಳ ದರಖಾಸ್ತು ನೋಂದಣಿಯ ಪ್ರಮಾಣಿತ ಪ್ರತಿ

(ಸಿ) ಸಾಗುವಳಿ ಚೀಟಿ ನೋಂದಣಿ ಉದ್ಧೃತ ಭಾಗದ ಪ್ರತಿ.

(ಡಿ) ಭೂಮಿಯ ಸೂಚ್ಯಂಕದ ಪ್ರಮಾಣಿತ ಪ್ರತಿ.

( ಇ) ಹಕ್ಕು ಪತ್ರಗಳ ದಾಖಲೆಯ ಪ್ರಮಾಣಿತ ಪ್ರತಿಗಳು-ಮೂರು

(ಎಫ್)ದಿನಾಂಕ: 23-02-1983 ರ ಮಾರಾಟ ಪತ್ರದ ಪ್ರತಿ (ದಸ್ತಾವೇಜು ಸಂಖ್ಯೆ .1634)

(ಜಿ)ದಿನಾಂಕ: 23-02-1983 ರ ಮಾರಾಟ ಪತ್ರದ ಪ್ರತಿ (ದಸ್ತಾವೇಜು ಸಂಖ್ಯೆ .1635)

(ಹೆಚ್)ದಿನಾಂಕ: 17-03-1989 ರ ಮಾರಾಟ ಪತ್ರದ ಪ್ರತಿ (ದಸ್ತಾವೇಜುಸಂಖ್ಯೆ: 8418

(ಐ)ದಿನಾಂಕ: 17-03-1989 ರ ಮಾರಾಟ ಪತ್ರದ ಪ್ರತಿ (ದಸ್ತಾವೇಜುಸಂಖ್ಯೆ: 8419)

(ಜೆ) ಎಂಆರ್ 3 ಮತ್ತು 4/1988-89 ರಲ್ಲಿನ ಹಕ್ಕು ಬದಲಾವಣೆ ನೋಂದಣಿಯ ಉದ್ಧೃತ ಭಾಗದ ಪ್ರಮಾಣಿತ ಪ್ರತಿ.

(ಕೆ)ದಿನಾಂಕ: 25-11-1989 ರಂದು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರು ನೀಡಿದ ಕಚೇರಿ ಜ್ಞಾಪನ ಪತ್ರದ (ಪರಿವರ್ತನೆ ಆದೇಶ) ಪ್ರತಿ

(ಎಲ್) 2001-02 ರಿಂದ 2008-2009 ರವರೆಗಿನ ಆರ್.ಟಿ.ಸಿ. ಉದ್ಧೃತಭಾಗಗಳ ಪ್ರತಿ- 8 ಸಂಖ್ಯೆಗಳು.

17. 2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು, ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಉದ್ದೇಶಿಸಲಾದಂತೆ ಯಾವುದೇ ವಿಚಾರಣೆಯನ್ನು ನಡೆಸದೇ, ಪ್ರಶ್ನಿತ ಆದೇಶದ ಮೂಲಕದಿನಾಂಕ: 31-07-2007 ರ ಎಂ.ಆರ್.ಸಂಖ್ಯೆ: 2/2007-08 ರಲ್ಲಿನ ಅರ್ಜಿದಾರನ ಹೆಸರಿನಲ್ಲಿರುವ ಖಾತೆಯನ್ನು ರದ್ದುಗೊಳಿಸಿದ್ದಾರೆ ಮತ್ತು 6 ಎಕರೆಗಳ ಭೂಮಿಯನ್ನು ರಾಜ್ಯ ಸರ್ಕಾರದಲ್ಲಿ ನಿಹಿತಗೊಳಿಸಿದ್ದಾರೆ.ಪ್ರಶ್ನಿತ ಆದೇಶದಲ್ಲಿ, ಪ್ರಾರಂಭದಲ್ಲಿ, ' ವಿಷಯ ' ವನ್ನು ಸಂಕ್ಷಿಪ್ತವಾಗಿ ವಿವರಿಸುವಾಗ, ಸರ್ವೇ ಸಂಖ್ಯೆ -1 ( ಎ) ರಲ್ಲಿನ ಎರಡು ಎಕರೆಗಳ ಭೂಮಿಯ ಸಂಬಂಧದಲ್ಲಿ ಅಧಿನಿಯಮದ 136 ( 3) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಕಾಲವಿಳಂಬವಾಗಿ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಸಂಬಂಧಪಟ್ಟ ವಿಷಯವನ್ನು ತಿಳಿಸಲಾಗಿದ್ದರೂ, ದುರಾದೃಷ್ಟವಶಾತ್, ಪ್ರಶ್ನಿತ ಆದೇಶದ ಪ್ರಧಾನ ಭಾಗದಲ್ಲಿ, ಸರ್ವೇ ಸಂಖ್ಯೆ -1 ( ಎ) ರಲ್ಲಿನ 6 ಎಕರೆಗಳ ಭೂಮಿಯನ್ನು ರಾಜ್ಯ ಸರ್ಕಾರದಲ್ಲಿ ನಿಹಿತಗೊಳಿಸಲಾಗಿದೆ ಎಂದು ಹೇಳಲಾಗಿರುತ್ತದೆ.ಆಕ್ಷೇಪಣೆಗಳೊಂದಿಗೆ, ಅರ್ಜಿದಾರನು ದರಖಾಸ್ತಿನ ನೋಂದಣಿಯ ಪ್ರಮಾಣಿತ ಪ್ರತಿಗಳನ್ನು, ಸಾಗುವಳಿ ಚೀಟಿ ಉತ್ಕೃತಭಾಗವನ್ನು, ಭೂಮಿಯ ಸೂಚ್ಯಂಕ ಮತ್ತು ಹಕ್ಕುಪತ್ರಗಳ ದಾಖಲೆಯನ್ನು;

ಹಲವಾರು ಮಾರಾಟ ಪತ್ರಗಳನ್ನು, ಹಕ್ಕು ಬದಲಾವಣೆಯ ನೋಂದಣಿಯ ಉದ್ಧತಭಾಗ ಮತ್ತು ಆರ್ಟಿಸಿ ಉದ್ಧೃತಭಾಗಗಳ ಪ್ರಮಾಣಿತ ಪ್ರತಿಗಳನ್ನು; ಕೃಷಿಯೇತರ/ಕೈಗಾರಿಕಾ ಉದ್ದೇಶ ಮೊದಲಾದವುಗಳಿಗಾಗಿ ಭೂ ಪರಿವರ್ತನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ನೀಡಿದದಿನಾಂಕ: 25-11-1989 ರ ಕಚೇರಿ ಜ್ಞಾಪನಾಪತ್ರದ ಪ್ರತಿಯನ್ನು, ಅರ್ಜಿದಾರರು ಹಾಜರುಪಡಿಸಿದ್ದರೂ, ಜಿಲ್ಲಾಧಿಕಾರಿಗಳು, ಯಾವುದೇ ದಸ್ತಾವೇಜುಗಳನ್ನು ಅರ್ಜಿದಾರನು ಹಾಜರುಪಡಿಸಿಲ್ಲವೆಂಬ ತೀರ್ಮಾನಕ್ಕೆ ಬಂದಿರುವುದಲ್ಲದೆ, ಮಂಜೂರಾತಿ ನೀಡಲಾಗಿದೆ ಎಂಬುದು ಸುಳ್ಳಾಗಿದೆ ಎಂಬ ತೀರ್ಮಾನಕ್ಕೆ ಬಂದು ಪ್ರಶ್ನಿತ ಆದೇಶವನ್ನು ಹೊರಡಿಸಲು ಮುಂದಾಗಿರುವುದು ದುರಾದೃಷ್ಟಕರ ಸಂಗತಿಯಾಗಿರುತ್ತದೆ.

18. ಅಧಿಕಾರವ್ಯಾಪ್ತಿಯನ್ನು ಹೊಂದಿರುವ ವಿಭಾಗಾಧಿಕಾರಿಗಳು, ಸರ್ವೇ ಸಂಖ್ಯೆ .1, ಅರಬಿನ್ನಮಂಗಲ ಗ್ರಾಮ, ಜಾಲಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ರಾಜಕೀಯ ಸಂತ್ರಸ್ಥರಾಗಿದ್ದ ಶ್ರೀ ರಾಮಮೂರ್ತಿ ಮತ್ತು ಇತರೆ 15 ವ್ಯಕ್ತಿಗಳ ಪರವಾಗಿದಿನಾಂಕ: 14-11-1962 ರ ಮಂಜೂರಾತಿ ಆದೇಶದಸಂಖ್ಯೆ: ಎಲ್ಎನ್ಡಿ-ಎಸ್ಎಆರ್/1-551/1960-61 ರ ಮೇರೆಗೆ ತಲಾ 6 ಎಕರೆಗಳ ಭೂಮಿಯನ್ನು ಮಂಜೂರು ಮಾಡಿದ್ದರು ಎಂಬುದು ಅರ್ಜಿದಾರನ ನಿರ್ದಿಷ್ಟ ವಾದವಾಗಿರುತ್ತದೆ.ಒಪ್ಪಿಕೊಂಡಿರುವಂತೆ, ತಲಾ 6 ಎಕರೆಗಳ ವಿಸ್ತೀರ್ಣದ ಭೂಮಿಯನ್ನು ಶ್ರೀ ರಾಮಮೂರ್ತಿ ಎಂಬುವವರ ಜೊತೆಯಲ್ಲಿ ಇತರ 15 ಜನ ರಾಜಕೀಯ ಸಂತ್ರಸ್ಥರಿಗೂ ಮಂಜೂರು ಮಾಡಲಾಗಿದ್ದರೂ, ಅವರ ವಿರುದ್ಧ ಜಿಲ್ಲಾಧಿಕಾರಿಗಳು ಯಾವುದೇ ವ್ಯವಹರಣೆಗಳನ್ನು ಪ್ರಾರಂಭಿಸಿಲ್ಲ, ಇದರ ಅಡಿಯಲ್ಲಿ ಅರ್ಜಿದಾರರು ವಿವಾದದಲ್ಲಿರುವ ಸ್ವತ್ತಿನ ಸಂಬಂಧದಲ್ಲಿ ಹಕ್ಕುಗಳನ್ನು ಕ್ಲೇಮು ಮಾಡಿರುತ್ತಾರೆ ಮತ್ತು ಆ ಮಟ್ಟಿಗೆ ಪ್ರಶ್ನಿತ ಆದೇಶದಲ್ಲಿ ಯಾವುದೇ ರಹಸ್ಯ ವಿಷಯವೇನು ಇರುವುದಿಲ್ಲ.ಇಲ್ಲಿ ಜಿಲ್ಲಾಧಿಕಾರಿಗಳು, ತಮ್ಮ ಇಚ್ಛಾನುಸಾರವಾಗಿ ಆಯ್ಕೆ ಮಾಡುವ ವಿಧಾನದ ಮೂಲಕ ಅಧಿನಿಯಮದ 136 ( 3) ನೇ ಪ್ರಕರಣದ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಿದ್ದಾರೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.ಇದು ಭಾರತ ಸಂವಿಧಾನದ 14 ನೇ ಮತ್ತು 21 ನೇ ಅನುಚ್ಛೇದಗಳ ಉಲ್ಲಂಘನೆಯಾಗಿರುತ್ತದೆ.ಈ ಏಕೈಕ ಕಾರಣದ ಮೇಲೆ ಪ್ರಶ್ನಿತ ಆದೇಶವು ರದ್ದುಗೊಳಿಸಲು ಅರ್ಹವಾಗಿರುತ್ತದೆ.

19. ಕರ್ನಾಟಕ ಭೂ ಕಂದಾಯ ಅಧಿನಿಯಮದ ಅಡಿಯಲ್ಲಿ ಯಾವುದೇ ಪರಿಮಿತಿಯನ್ನು ಗೊತ್ತುಪಡಿಸಿಲ್ಲದಿರುವುದರಿಂದ, ಸೂಕ್ತ ಅವಧಿಯೊಳಗೆ ವ್ಯವಹರಣೆಗಳನ್ನು ಪ್ರಾರಂಭಿಸುವುದು ಸಂಬಂಧಪಟ್ಟ ಪ್ರಾಧಿಕಾರಿಗಳ ಕರ್ತವ್ಯವಾಗಿರುತ್ತದೆಂಬುದು ಸುಸ್ಥಾಪಿತ ಸಂಗತಿ.ಇದಕ್ಕೆ ಒಪ್ಪಿಕೊಂಡಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, 48 ವರ್ಷಗಳಿಗಿಂತ ಹೆಚ್ಚು ಕಾಲಾವಧಿಯು ಗತಿಸಿಹೋದ ಚ ತರುವಾಯ ವಿಳಂಬವಾಗಿ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿದ್ದು, ಇದನ್ನು ಸಮರ್ಥಿಸಲಾಗುವುದಿಲ್ಲ.ನನ್ನ ಅಭಿಪ್ರಾಯವನ್ನು ಚೆಡಿ ಲಾಲ್ ಯಾದವ್ -ವಿರುದ್ಧ ಹರಿ ಕಿಶೋರ್ ಯಾದವ್ ' 1 ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ಪುಷ್ಟಿಕರಿಸಲಾಗುತ್ತದೆ.ಇದರಲ್ಲಿ ಯಾವುದೇ ಕಾಲಪರಿಮಿತಿಯನ್ನು ನಿರ್ದಿಷ್ಟಪಡಿಸದಿದ್ದಾಗ ಯಾವುದೇ ಸೂಕ್ತ ಸಮಯದೊಳಗೆ ಕ್ರಮಗಳನ್ನು ತೆಗೆದುಕೊಳ್ಳಲೇಬೇಕು.ಅಲ್ಲದೆ, ಪ್ರಯೋಜನಕಾರಿ ಕಾನೂನುಗಳೊಂದಿಗೆ ವ್ಯವಹರಿಸುವಾಗಲು ಸಹ ಕಾಲಪರಿಮಿತಿಯನ್ನು ನಿಗದಿಪಡಿಸದಿದ್ದಾಗ, ವಿಳಂಬದ ತರುವಾಯ ಪ್ರಾರಂಭಿಸಲಾದ ಕ್ರಮಗಳನ್ನು ಮತ್ತು ಮೂರನೇ ವ್ಯಕ್ತಿಗಳ ಮೂಲಕ ಪ್ರಾಪ್ತವಾದ ಹಕ್ಕುಗಳನ್ನು ಹಗುರವಾಗಿ ನಿರ್ಲಕ್ಷಿಸಲಾಗುವುದಿಲ್ಲ.ಸದರಿ ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು 9 ರಿಂದ 14 ರವರೆಗೆ ಪ್ಯಾರಾಗಳಲ್ಲಿ ಚ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತಾರೆ:

"9. ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರು, ಅಧಿನಿಯಮವು, ನಿಯಮಿಸಲಾದ ಅವಧಿಯಲ್ಲಿ ಯಾವ ರೈತರಿಂದ ಕಸಿದುಕೊಳ್ಳಲಾಗಿತ್ತೋ ಅಂಥ ರೈತರಿಗೆ ಪರಿಹಾರವನ್ನು ನೀಡಲು ಉದ್ದೇಶಿಸಲಾದ ಕಾನೂನಿನ ಲಾಭದಾಯಕ ಭಾಗವಾಗಿರುವುದರಿಂದ

1. (2018) 12 ಎಸ್ಸಿಸಿ 527 ವಿಳಂಬವನ್ನು ಕಡೆಗಣಿಸಬಾರದೆಂದು ಬಲವಾಗಿ ನಿವೇದಿಸಿದ್ದಾರೆ.ನ್ಯೂ ಇಂಡಿಯಾ ಅಶೂರೆನ್ಸ್ ಕಂಪನಿ ಲಿಮಿಟೆಡ್ -ವಿರುದ್ದ ಸಿ. ಪದ್ಮ [ನ್ಯೂ ಇಂಡಿಯಾ ಅಶೂರೆನ್ಸ್ ಕಂಪನಿ ಲಿಮಿಟೆಡ್ -ವಿರುದ್ದ ಸಿ. ಪದ್ಮ, (2003) 7 ಎಸ್ಸಿಸಿ 713:2003 ಎಸ್ಸಿ (ಕ್ರಿಮಿನಲ್) 1709], ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದು, ಅದರಲ್ಲಿ ಈ ನ್ಯಾಯಾಲಯವು,ದಿನಾಂಕ: 18-12-1989 ರಂದು ನಡೆದ ಮೋಟಾರು ಅಪಘಾತದಲ್ಲಿ, ಅರ್ಜಿದಾರನ ಕ್ಲೇಮನ್ನು ಆ ಸಮಯದ ಮೂಲಕ ತಡೆಹಿಡಿಯಲಾಗಿದೆಯಾದರೂ,ದಿನಾಂಕ: 02-11-1995 ರಂದು ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ.ಅದರ ಕಾಲಪರಿಮಿತಿಯ ತರುವಾಯ, ಪರಿನಿಯಮವನ್ನು ನಿರ್ವಹಿಸಿದ್ದರಿಂದ ನಿರ್ಬಂಧವನ್ನು ತೆಗೆದು ಹಾಕಲಾಯಿತು ಎಂದು ತೀರ್ಪನ್ನು ನೀಡಲಾಗಿದೆ.ಕಾಲಪರಿಮಿತಿಯ ಅವಧಿಯನ್ನು ನಿಯಮಿಸಲಾಗದಿದ್ದರೂ, ಕಾಲಪರಿಮಿತಿ ಅಧಿ ನಿ ಂ ತವು, 1963 ರ 137 ನೇ ಅನುಚ್ಛೇದ ಕ ಅವಲ ಂ ಬಿಸದಿರಬಹುದೆಂದು ಈ ನ್ಯಾಯಾಲಯವು ತೀರ್ಪು ನೀಡಿದೆ.ತದನುಸಾರವಾಗಿ, ಅರ್ಜಿದಾರನ ಕ್ಲೇಮನ್ನು, ಮೋಟಾರು ವಾಹನಗಳ ಅಧಿನಿಯಮ, 1988 ರ 166 ನೇ ಪ್ರಕರಣದ ( 3) ನೇ ಉಪ-ಪ್ರಕರಣದ ವಿಲೋಪದ ತರುವಾಯ, ಕಾಲಪರಿಮಿತಿಯ ಕಾರಣದ ಮೇಲೆ ಪ್ರಾರಂಭದಲ್ಲಿಯೇ ತಿರಸ್ಕರಿಸಲಾಗುವುದಿಲ್ಲವೆಂದು, ಆರು ತಿಂಗಳುಗಳ ಅವಧಿಗೆ ಉಪಬಂಧಿಸಲಾಗಿತ್ತು ಎಂದು ಈ ನ್ಯಾಯಾಲಯವು ತೀರ್ಪು ನೀಡಿದೆ.ಈ ಅಭಿಪ್ರಾಯವನ್ನು ಪರಿನಿಯಮದ ಉದ್ದೇಶಕ್ಕಾಗಿ ಗಮನಕ್ಕೆ ತೆಗೆದುಕೊಳ್ಳಲಾಗಿದೆ.ಆದಾಗ್ಯೂ, ಅವಲಂಬಿಸಲಾದ ತೀರ್ಪನ್ನು ಪ್ರಸ್ತುತ ಮೊಕದ್ದಮೆಗೆ ಅನ್ವಯ ಮಾಡಿಕೊಳ್ಳ ಲಾಗುವುದಿಲ್ಲವೆಂದು ನಾವು ನಿರ್ಣಯಿಸಿದ್ದೇವೆ.ಪರಿನಿಯಮವನ್ನು ಕಾಲಪರಿಮಿತಿ ಅವಧಿಗಾಗಿ ಉಪಬಂಧಿಸದಿದ್ದಲ್ಲಿ, ಪರಿನಿಯಮದ ಉಪಬಂಧಗಳನ್ನು ಯುಕ್ತ ಕಾಲದೊಳಗಾಗಿ ಅನ್ವಯಿಸಬೇಕು ಎಂಬುದು ಇತ್ಯರ್ಥಗೊಂಡ ಕಾನೂನಾಗಿದೆ.

10. ಪಿ. ರಾಮನಾಥ ಐಯ್ಯರ್ ರವರ ಅಡ್ವಾನ್ಸ್ಡ್ ಲಾ ಲೆಕ್ಸಿಕಾನ್ನ 3 ನೇ ಆವೃತ್ತಿಯಲ್ಲಿ " ಯುಕ್ತ ಕಾಲ " ಎಂಬುದನ್ನು ಈ ಮುಂದಿನಂತೆ ವಿವರಿಸಲಾಗಿದೆ:

" ಪ್ರತಿಯೊಬ್ಬ ಪಕ್ಷಕಾರರು ಹೊಂದಿರುವಂತಹ ಹಕ್ಕುಗಳನ್ನು ಮತ್ತು ಅನುಕೂಲಗಳನ್ನು ಪರಿರಕ್ಷಿಸುವುದು ವತು ಪ್ರತಿಯೊಬ್ಬ ಪ ಕ್ಷಕಾ ರ ನ al ಅನುಭವಿಸಬಾರದಂತಹ ನಷ್ಟಗಳಿಂದ ಆತನನ್ನು ರಕ್ಷಿಸುವುದು ಎಂಬುದೇ ಯುಕ್ತ ಕಾಲವಾಗಿರುತ್ತದೆ:

ಹಾಗಾಗಿ, ಒಬ್ಬ ಪಕ್ಷಕಾರನು ಹೊಂದಿರುವ ಹಕ್ಕುಗಳು ಮತ್ತು ಅನುಕೂಲಗಳನ್ನು ರಕ್ಷಿಸುವ ಸಲುವಾಗಿ ಮಾತ್ರವಾಗಿರದೆ, ಪ್ರತಿಯೊಬ್ಬ ಪಕ್ಷಕಾರನು ಅನುಭವಿಸಬಾರದಂತಹ ನಷ್ಟಗಳಿಂದ ಸಮಾನವಾಗಿ ಸಂರಕ್ಷಿಸುವುದಕ್ಕಾಗಿಯೂ ಸಹ ಸಮಯವನ್ನು ಯುಕ್ತವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು.ಹೀಗಾಗಿ ಯುಕ್ತ ಕಾಲದೊಳಗಾಗಿ ಕ್ರಮವನ್ನು ಕೈಗೊಳ್ಳಲಾಗಿದೆಯೇ ಎಂಬುದನ್ನು ನಷ್ಟಗಳನ್ನು ಅನುಭವಿಸಬಹುದಾದ ಪಕ್ಷಕಾರರ ದೃಷ್ಟಿಕೋನದಿಂದ ಸಹ ನೋಡಬೇಕು.

11. ಪ್ರಸ್ತುತ ಮೊಕದ್ದಮೆಯಲ್ಲಿ, ಉಚ್ಚ ನ್ಯಾಯಾಲಯವು ಈ ಚ ಮುಂದಿನಂತೆ ಅಭಿಪ್ರಾಯಪಟ್ಟಿತ್ತು ಎಂಬುದು ನಮ್ಮ ಗಮನಕ್ಕೆ ಬಂದಿದೆ.  ಹರಾಜು-ಮಾರಾಟವು 1942 ರಲ್ಲಿ ನಡೆಯಿತು." ಭೂಮಿಗಳನ್ನು ಪುನಸ್ಸ್ವಾಧೀನ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಅರ್ಜಿಯನ್ನು 1975 ರಲ್ಲಿ ಮೊದಲ ಬಾರಿಗೆ ಸಲ್ಲಿಸಲಾಯಿತು ಮತ್ತು ಅದರಿಂದ ಅಪೀಲನ್ನು 1983 ರಲ್ಲಿ ವಿಫಲತೆಗಾಗಿ ವಜಾಗೊಳಿಸಲಯಿತು.ಈ ಮಧ್ಯೆ ವಿವಾದಿತ ಭೂಮಿಗಳು ಎರಡು ಬಾರಿ ಕೈ ಬದಲಾಗಿ, 1962 ಮತ್ತು 1986 ರಿಂದ ಅಪೀಲುದಾರ-ರಿಟ್ ಅರ್ಜಿದಾರರ ಸ್ವಾಧೀನದಲ್ಲಿ ಇದ್ದವು.ಅಂಥ ದೀರ್ಘಾವಧಿಯ ಇತ್ಯರ್ಥದ ಸ್ಥಿತಿಯು ಕೆಲವು ಬಲವಾದ ಕಾರಣಗಳಿಗಾಗಿ ಮತ್ತು ಆ ಅಪೀಲನ್ನು ವಾಪಸ್ಸು ಪಡೆಯುವ ಸಲುವಾಗಿ ಅತ್ಯಂತ ಪ್ರಬಲವಾದ ಮೊಕದ್ದಮೆಯನ್ನು ಇತ್ಯರ್ಥಪಡಿಸುವುದರ ಮೇಲೂ ಸಹ ನಿಗದಿತವಾಗಿರಬಹುದು.ಆ ರೀತಿ ದೂರವಾಗಿ ಏನನ್ನಾದರೂ ಸೂಚಿಸಲು ದಾಖಲೆಯಲ್ಲಿ ಏನೂ ಇರುವುದಿಲ್ಲ.ಎರಡನೆಯದಾಗಿ, ಅಪೀಲುದಾರ-ರಿಟ್ ಅರ್ಜಿದಾರರಿಗೆ ಯಾವುದೇ ನೋಟೀಸು ನೀಡದೇ ಇದ್ದರೂ, ಅಪೀಲನ್ನು ವಾಪಸ್ಸು ಪಡೆಯುವಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಕ್ರಮವು, ಸ್ಪಷ್ಟವಾಗಿ ಕಾನೂನು ಬಾಹಿರವಾಗಿದೆ ಮತ್ತು ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣಗಳ ಉಲ್ಲಂಘನೆಯಾಗಿದೆ."

ಉಚ್ಚ ನ್ಯಾಯಾಲಯವು ಈ ನಿಟ್ಟಿನಲ್ಲಿ ಸ್ಪಷ್ಟವಾದ ನಿಲುವನ್ನು ತಾಳಿತ್ತು.

12. ಭೂಮಿಗಳ ಪುನಸ್ವಾಧೀನ ಪಡೆಯುವ ಸಲುವಾಗಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಅಧಿಕಾರವನ್ನು ಸ್ವಪ್ರೇರಣೆಯಿಂದ ಚಲಾಯಿಸಬಹುದೆಂದು ಮತ್ತು ಅ ಂ ಥ ಅಧಿಕಾರವನ್ನು ಚಲಾಯಿಸಲು ಯಾವುದೇ ಪರಿಮಿತಿಯನ್ನು ನಿಯಮಿಸದಿದ್ದರಿಂದ, ಈ ಮೊಕದ್ದಮೆಯಲ್ಲಿ ವಿಳಂಬವನ್ನು ಕಡೆಗಣಿಸಬಹುದು ಎಂದು ಅಪೀಲುದಾರರ ಪರವಾಗಿ ವಾದಿಸಲಾಗಿರುತ್ತದೆ.ಈ ನಿವೇದನೆಯು, ಅಂಥ ಅಧಿಕಾರವನ್ನು ಸ್ವಪ್ರೇರಣೆಯಿಂದ ಚಲಾಯಿಸಬಹುದಾದಲ್ಲಿ, ಅಂಥ ಅಧಿಕಾರವನ್ನು ಯಾವುದೇ ಕಾಲದಲ್ಲಿ ಚಲಾಯಿಸಬಹುದೆಂಬ ಅರ್ಥವನ್ನು ಒಳಗೊಳ್ಳುತ್ತದೆ.ಈ ನಿವೇದನೆಯು, ಜಿಲ್ಲಾಧಿಕಾರಿಗಳು -ವಿರುದ್ಧ-ಡಿ.ನರಸಿಂಗ್ ರಾವ್ [ಜಿಲ್ಲಾಧಿಕಾರಿಗಳು -ವಿರುದ್ಧ ಡಿ. ನರಸಿಂಗ್ ರಾವ್, (2015) 3 ಎಸ್ಸಿಸಿ 695:(2015) 2 ಎಸ್ಸಿಸಿ (ಸಿವಿಲ್) 396] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಮಾನಕ್ಕೆ ನೇರವಾಗಿ ವಿರುದ್ಧವಾಗಿರುತ್ತದೆ.ಈ ಮೊಕದ್ದಮೆಯಲ್ಲಿ ನ್ಯಾಯಾಲಯವು, ಆಂಧ್ರ ಪ್ರದೇಶದ ಉಚ್ಚ ನ್ಯಾಯಾಲಯದ [ಜಿಲ್ಲಾಧಿಕಾರಿಗಳು -ವಿರುದ್ಧ ಡಿ. ನರಸಿಂಗ್ ಚ ರಾವ್, 2010 ಎಸ್ಸಿ ಆನ್ಲೈನ್ ಎಪಿ 406:(2010) 6 ಎಎಲ್ಡಿ 748] ಅಭಿಪ್ರಾಯವನ್ನು ದೃಢೀಕರಿಸುತ್ತದೆ.ಆ ತೀರ್ಪಿನ ಪ್ಯಾರಾ ' 17 ' ರನ್ನು ಈ ಮುಂದಿನಂತೆ ಓದಲಾಗಿದೆ.[ಡಿ.ನರಸಿಂಗ್ ರಾವ್ ಮೊಕದ್ದಮೆ [ಜಿಲ್ಲಾಧಿಕಾರಿಗಳು ವಿರುದ್ಧ-ಡಿ.ನರಸಿಂಗ್ ರಾವ್, (2015) 3 ಎಸ್ಸಿಸಿ 695:(2015) 2 ಎಸ್ಸಿಸಿ (ಸಿವಿಲ್) 396], ಎಸ್ಸಿಸಿ ಪಿ. 706, ಪ್ಯಾರಾ 17)

" 17 ಯಾವುದೇ ಕಾಲಪರಿಮಿತಿಯನ್ನು ನಿಗದಿಪಡಿಸದಿದ್ದರೂ ಸಹ, ದೀರ್ಘಕಾಲದ ತರುವಾಯ ಸ್ವಪ್ರೇರಣೆಯಿಂದ ಮನರೀಕ್ಷಣೆಗೆ ತೆಗೆದುಕೊಂಡಿರುವ ಕ್ರಮವು ಸ್ವೇಚ್ಛಾನುಸಾರಿಯಾಗಿದ್ದು, ಇದು ಕಾನೂನಿನ ನಿಯಮದ ಪರಿಕಲ್ಪನೆಗೆ ತದ್ವಿರುದ್ಧವಾಗಿದೆ."

ಹೀಗಾಗಿ, ಈ ವಾದವನ್ನು ತಿರಸ್ಕರಿಸಲು ನಮಗೆ ಯಾವುದೇ ಹಿಂಜರಿಕೆಯಿಲ್ಲ.

13. ನಮ್ಮ ಅಭಿಪ್ರಾಯದಲ್ಲಿ ಯಾವುದೇ ಕಾಲಪರಿಮಿತಿಯನ್ನು ಗೊತ್ತುಪಡಿಸದೇ ಇದ್ದಾಗ ಯುಕ್ತ ಕಾಲದ ಒಳಗಾಗಿ, ಸ್ವಪ್ರೇರಣೆಯಿಂದಾಗಲಿ ಅಥವಾ ಪಕ್ಷಕಾರರ ಅರ್ಜಿಯ ಮೇಲಾಗಲಿ ಕ್ರಮವನ್ನು ಕೈಗೊಳ್ಳಲೇಬೇಕು.ನಿಸ್ಸಂದೇಹವಾಗಿ, ಯುಕ್ತ ಕಾಲವು ಪ್ರತಿಯೊಂದು ಮೊಕದ್ದಮೆಯ ಸನ್ನಿವೇಶಗಳನ್ನು ಮತ್ತು ಪರಿನಿಯಮದ ಉದ್ದೇಶವನ್ನು ಅವಲಂಬಿಸಿರುತ್ತದೆ.ನಮ್ಮ ಮು ೦ ದಿರುವ ಪ್ರಸ್ತುತ ಮೊಕದ್ದಮೆಯಲ್ಲಿ, ಕ್ರಮ ತೆಗೆದುಕೊಂಡಿರುವುದು ಸಂಪೂರ್ಣವಾಗಿ ವಿಳಂಬವಾಗಿರುತ್ತದೆ ಮತ್ತು ನಿಸ್ಸಂಶಯವಾಗಿ, ಭೂಮಿ ಯಾವುದೇ ಹಕ್ಕುಗಳಿಂದ ಅತಿಕ್ರಮಿಸಲ್ಪಟ್ಟಿಲ್ಲ ಎಂಬ ವಿಶ್ವಾಸದಿಂದ ಈ ಅವಧಿಯಲ್ಲಿ ಅದನ್ನು ಹಲವಾರು ಬಾರಿ ವರ್ಗಾಯಿಸಲಾಗಿತ್ತು ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಯುಕ್ತ ಕಾಲವನ್ನು ಮೀರಿ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂಬುದು ನಮಗೆ ಸ್ಪಷ್ಟವಾಗುತ್ತದೆ.

14. ಕಾನೂನು ಕೇವಲ ಪ್ರಯೋಜನಕಾರಿಯಾಗಿದೆ ಮತ್ತು ಕಾಲಪರಿಮಿತಿಯನ್ನು ಗೊತ್ತುಪಡಿಸಿಲ್ಲವೆಂಬ ಕಾರಣಕ್ಕಾಗಿಯೇ, ಯಾರೇ ವ್ಯಕ್ತಿಗಳು ಆರ್ಜಿಸಿಕೊಂಡ ಹಕ್ಕುಗಳನ್ನು ಹಗುರವಾಗಿ ನಿರ್ಲಕ್ಷಿಸಲಾಗುವುದಿಲ್ಲ ಮತ್ತು ಸೀತು ಸಾಹು ವಿರುದ್ಧ ಜಾರ್ಖಂಡ್ ರಾಜ್ಯ [ಸೀತು ಸಾಹು -ವಿರುದ್ಧ ಜಾರ್ಖಂಡ್ ರಾಜ್ಯ, (2004) 8 ಎಸ್ಸಿಸಿ 340] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ, ಅಸಮಂಜಸವಾದ ವಿಳಂಬದ ತರುವಾಯ ವ್ಯವಹರಣೆಗಳನ್ನು ಪ್ರಾರಂಭಿಸಲು ಸಾಧ್ಯವಿಲ್ಲ ಎಂಬುದಾಗಿ ನಾವು ಅಭಿಪ್ರಾಯಪಟ್ಟಿರುತ್ತೇವೆ.

20. ಒಪ್ಪಿಕೊಂಡಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, ವಿಭಾಗಾಧಿಕಾರಿಗಳು, 1962 ನೇ ವರ್ಷದಲ್ಲಿ ರಾಜಕೀಯ ಸಂತ್ರಸ್ಥರಾಗಿದ್ದ ರಾಮಮೂರ್ತಿಯವರಿಗೆ ಅರೆಬಿನ್ನಮಂಗಲ ಗ್ರಾಮದ ಸರ್ವೇ ಸಂಖ್ಯೆ .1 ರಲ್ಲಿ 6 ಎಕರೆಗಳ ಭೂಮಿಯನ್ನು ಮಂಜೂರು ಮಾಡಿದ್ದಾರೆ, ಮತ್ತು ಆತನ ಮರಣದ ನಂತರ, 1983 ನೇ ವರ್ಷದಲ್ಲಿ, ಆತನ ಪತ್ನಿ, ಪುರುಷೋತ್ತಮ್ ಎಂಬುವರಿಗೆ 3 ಎಕರೆಗಳ ಭೂಮಿಯನ್ನು ಮತ್ತು ಇನ್ನುಳಿದ 3 ಎಕರೆಗಳ ಭೂಮಿಯನ್ನು ಯಶೋಧಮ್ಮ ಎಂಬುವವರಿಗೆ ಮಾರಾಟ ಮಾಡಿದ್ದರು.ತರುವಾಯ, ಅವರೂ ಸಹದಿನಾಂಕ: 17-03-1989 ರಂದು ಅರ್ಜಿದಾರರ ತಂದೆಗೆ ಆ ಭೂಮಿಯನ್ನು ಮಾರಾಟ ಮಾಡಿದ್ದರು.1962 ರಿಂದ ಇಂದಿನವರೆಗೆ, ವಿವಿಧ ವ್ಯಕ್ತಿಗಳ ಹೆಸರಿನಲ್ಲಿ ವಿವಿಧ ಮಾರಾಟ ಪತ್ರಗಳನ್ನು ಬರೆಸಿಕೊಳ್ಳಲಾಯಿತು.ಕಂದಾಯದ ನಮೂದುಗಳು ಪ್ರಾರಂಭದಲ್ಲಿ ಮೂಲ ಮಂಜೂರಾತಿಧಾರಕನ ಹೆಸರಿನಲ್ಲಿದ್ದವು ಮತ್ತು ತರುವಾಯ, ಧಾರಕನ ಪತ್ನಿ ಕಮಲಮ್ಮರವರ ಹೆಸರಿನಲ್ಲಿ ವರ್ಗಾವಣೆಗೊಂಡವು, ಮತ್ತು ತದನಂತರ, ನೋಂದಾಯಿತ ಮಾರಾಟ ಪತ್ರಗಳ ಆಧಾರದ ಮೇಲೆ ಪುರಷೋತ್ತಮ್ ಮತ್ತು ಯಶೋಧಮ್ಮ ರವರ ಹೆಸರಿನಲ್ಲಿ ಮತ್ತು ಅದಾದ ನಂತರ ಅರ್ಜಿದಾರರ ತಂದೆಯ ಹೆಸರಿನಲ್ಲಿ ವರ್ಗಾವಣೆಗೊಂಡವು.ನಿಕಟ ವಿಶೇಷ ಜಿಲ್ಲಾಧಿಕಾರಿಗಳುದಿನಾಂಕ: 25-11-1989 ರಂದು ಅಧಿನಿಯಮದ 95 ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಮೂಲಕ ಭೂ ಪರಿವರ್ತನಾ ಆದೇಶವನ್ನು ಸಹ ಹೊರಡಿಸಿದ್ದರು.ಈ ಎಲ್ಲಾ ಅಂಶಗಳ ಹೊರತಾಗಿಯೂ ಮತ್ತು ನಿಕಟ ಜಿಲ್ಲಾಧಿಕಾರಿಗಳು ಹೊರಡಿಸಿದ ಭೂ ಪರಿವರ್ತನಾ ಆದೇಶವನ್ನು ಮತ್ತು ಆಕ್ಷೇಪಣೆಗಳೊಂದಿಗೆ ಅರ್ಜಿದಾರರು ಹಾಜರುಪಡಿಸಿದ ಹಲವಾರು ದಸ್ತಾವೇಜುಗಳನ್ನೂ ಸಹ ನಿರ್ಲಕ್ಷಿಸುವ ಮೂಲಕ, ಜಿಲ್ಲಾಧಿಕಾರಿಗಳು, ಅಧಿನಿಯಮದ 136 ( 3) ನೇ ಪ್ರಕರಣದ ಅಡಿಯಲ್ಲಿ ವ್ಯವ ಹರಣೆಗಳನ್ನು ಪ್ರಾರ ೦ ಭಿಸಲು ಮುಂದಾಗಿದ್ದಾರೆ.ಇದು ಅನುಮತೀಯವಾಗಿರುವುದಿಲ್ಲ.

21. ಸರ್ಕಾರದಲ್ಲಿ ವಿವಿಧ ಅಧಿನಿಯಮಿತಿಗಳ ಅಡಿಯಲ್ಲಿ ಪ್ರಾಧಿಕಾರಿಗಳು, ಸಂವಿಧಾನಾತ್ಮಕ ಕರ್ತವ್ಯದ ಅಡಿಯಲ್ಲಿಯೇ ತಮ್ಮ ಇತರ ಅಧಿಕಾರಗಳನ್ನು ಹೊಂದಿರುತ್ತಾರೆಂಬುದು ಸುಸ್ಥಾಪಿತ ವಿಷಯ.ಪ್ರತಿಯೊಬ್ಬ

ಸರ್ಕಾರಿ ನೌಕರನು, ಸಮಾಜದ ನ್ಯಾಸಧಾರಿಯಾಗಿರುತ್ತಾನೆ ಮತ್ತು ಸರ್ಕಾರದ ಆಡಳಿತದ ಎಲ್ಲಾ ಮಗ್ಗಲುಗಳಲ್ಲಿ, ಪ್ರತಿಯೊಬ್ಬ ಸರ್ಕಾರಿ ನೌಕರನು, ರಾಷ್ಟ್ರವನ್ನು ಅಖಂಡತೆಗೊಳಿಸಲು, ಸರ್ಕಾರಿ ಆಡಳಿತದಲ್ಲಿ ಘನತೆ ಮತ್ತು ದಕ್ಷತೆಯನ್ನು ಸಾಧಿಸಲು, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಂವಿಧಾನಾತ್ಮಕ ಕಾರ್ಯನೀತಿಗಳನ್ನು ಅನುಷ್ಠಾನಗೊಳಿಸಲು ತಮ್ಮ ಪ್ರಾಮಾಣಿಕತೆಯನ್ನು, ಸಮಗ್ರತೆಯನ್ನು, ನೀತಿನಿಷ್ಠೆಯನ್ನು ಮತ್ತು ವಿಶ್ವಾಸವನ್ನು ತೋರಿಸಬೇಕು.ಭಾರತ ಸಂವಿಧಾನದ 14, 21 ಮತ್ತು 300 ಎ ಅನುಚ್ಛೇದಗಳ ಅಡಿಯಲ್ಲಿನ ಸಂವಿಧಾನಾತ್ಮಕ ನೀತಿಯನ್ನು ಮತ್ತು ರಾಜ್ಯ ಕಾರ್ಯನೀತಿಯ ಎಲ್ಲ ಅಂತರ ಸಂಬಂಧಿತ ನಿರ್ದೇಶಕ ತತ್ವಗಳನ್ನು ಕಾರ್ಯಗತಗೊಳಿಸಲು ಸರ್ಕಾರಿ ನೌಕರನಿಗೆ ಕರ್ತವ್ಯವನ್ನು ಮತ್ತು ಅಧಿಕಾರವನ್ನು ವಹಿಸಿಕೊಡಲಾಗಿದ್ದು, ಆತನು, ಸಂವಿಧಾನಾತ್ಮಕ ಗುರಿಗಳನ್ನು ಕಾರ್ಯಗತಗೊಳಿಸುವಲ್ಲಿ ಆಡಳಿತದಲ್ಲಿ ಪಾರದರ್ಶಕತೆಯನ್ನು ತೋರಿಸಬೇಕು ಮತ್ತು ಅವುಗಳನ್ನು ಯುಕ್ತವಾಗಿ ಕಾರ್ಯಗತಗೊಳಿಸಲು ಜವಾಬ್ದಾರನಾಗಿರಬೇಕು.

22. ಒಪ್ಪಿಕೊಂಡಿರುವಂತೆ ಪ್ರಸ್ತುತ ಮೊಕದ್ದಮೆಯಲ್ಲಿ, 2 ನೇ ಎದುರುದಾರ ವಿಶೇಷ ಜಿಲ್ಲಾಧಿಕಾರಿಗಳು, ಅರ್ಜಿದಾರನು ಆಕ್ಷೇಪಣೆಗಳೊಂದಿಗೆ ಹಾಜರುಪಡಿಸಿದ ಹಲವಾರು ದಸ್ತಾವೇಜುಗಳನ್ನು ಕಡೆಗಣಿಸಿದ್ದಾರೆ ಮತ್ತು ಅವರು, ಅಧಿನಿಯಮದ 136 ( 3) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸುವಾಗ ಪಾರದರ್ಶಕತೆಯನ್ನು ತೋರಿಸಿಲ್ಲ ಮತ್ತು ಈ ಎಲ್ಲಾ ಕಾರಣದ ಮೇಲೂ ಸಹ, ಪ್ರಶ್ನಿತ ಆದೇಶವು ರದ್ದುಗೊಳಿಸಲು ಅರ್ಹವಾಗಿದೆ.

VI.ನಿರ್ಣಯ

23. ಮೇಲೆ ಹೇಳಲಾದ ಕಾರಣಗಳಿಗಾಗಿ, 2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು 48 ವರ್ಷಗಳಿಗಿಂತ ಹೆಚ್ಚು ಕಾಲ ಗತಿಸಿಹೋದ ತರುವಾಯ, ಚ ಅದರಲ್ಲೂ ನಿಕಟ ವಿಶೇಷ ಜಿಲ್ಲಾಧಿಕಾರಿಗಳುದಿನಾಂಕ: 25-11-1989 ರಲ್ಲಿ ಪ್ರಶ್ನೆತ ಜಮೀನನ್ನು ಕೃಷಿಯೇತರ/ಕೈಗಾರಿಕಾ ಉದ್ದೇಶಗಳಿಗಾಗಿ ಪರಿವರ್ತಿಸಿದ್ದಾಗಲೂ ಸಹ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ 136 ( 3) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಕಾಲವಿಳಂಬವಾಗಿ ವ್ಯವಹರಣೆಗಳನ್ನು ಪ್ರಾರಂಭಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲವೆಂದು ಅಭಿಪ್ರಾಯಪಡುತ್ತಾ, ಪ್ರಸ್ತುತ ರಿಟ್ ಅರ್ಜಿಯಲ್ಲಿ ಪ್ರಶ್ನಿಸಲಾದ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ ಮತ್ತು ಆದ್ದರಿಂದ, ಪ್ರಶ್ನಿತ ಆದೇಶವು ಸಮರ್ಥನೀಯವಾಗಿಲ್ಲದಿರುವುದರಿಂದ ಅದನ್ನು ರದ್ದುಗೊಳಿಸಲು ಅರ್ಹವಾಗಿದೆ.

24. ತದನುಸಾರವಾಗಿ, ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ.ಅನುಬಂಧ- ' X ' ರ ಪ್ರಕಾರದಿನಾಂಕ: 01-04-2011 ರಂದು ಆರ್ಆರ್ಟಿ ( 2) (ಎನ್ಎ) ಸಿಆರ್ 501/2009-10 ರಲ್ಲಿ ಮಾಡಲಾದ 2 ನೇ ಎದುರುದಾರ-ವಿಶೇಷ ಜಿಲ್ಲಾಧಿಕಾರಿಗಳು ಹೊರಡಿಸಿದ ಪ್ರಶ್ನಿತ ಆದೇಶವನ್ನು ಈ ಮೂಲಕ ರದ್ದುಪಡಿಸಲಾಗಿರುತ್ತದೆ.

ನೀಡಲಾದ ತೀರ್ಪನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲಾಗಿರುತ್ತದೆ.